ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 23-07-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾಗೋಷ್ಠಿ:<br><br>ಪ್ರಿಯಾಂಕ ಖರ್ಗೆ,<br><br>ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವರು | **25-7-2016**<br>ಸೋಮವಾರ<br><br>ಬೆಳಿಗ್ಗೆ<br>**11-00** ಗಂಟೆಗೆ | ಕೊಠಡಿ ಸಂಖ್ಯೆ **318**,<br>ಮೂರನೇ ಮಹಡಿ,<br>ವಿಕಾಸಸೌಧ,<br>ಬೆಂಗಳೂರು. |
| 1. | ಬೆಳ್ಳಿಹೆಜ್ಜೆ:<br><br>ಹೆಚ್.ಡಿ. ಗಂಗರಾಜು,<br>ಹಿರಿಯ ಚಿತ್ರ ನಿರ್ಮಾಪಕ, ವಿತರಕ ಹಾಗೂ ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರು<br><br>ಮುಖ್ಯ ಅತಿಥಿಗಳು:<br><br>ಡಾ. ಜಯಮಾಲ,<br>ಖ್ಯಾತ ಕಲಾವಿದರು ಹಾಗೂ<br>ವಿಧಾನ ಪರಿಷತ್ ಸದಸ್ಯರು<br><br>ಎನ್.ಆರ್. ವಿಶುಕುಮಾರ್,<br>ನಿರ್ದೇಶಕರು,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,<br>ಬೆಂಗಳೂರು.<br><br>ಎಸ್.ಕೆ. ಭಗವಾನ್ | **25-7-2016**<br>ಸೋಮವಾರ<br><br>ಸಂಜೆ<br>**5-00** ಗಂಟೆಗೆ | ಚಾಮುಂಡೇಶ್ವರಿ ಸ್ಟುಡಿಯೋಸ್,<br>ಮಿಲ್ಲರ್ಸ್ ರಸ್ತೆ,<br>ಬೆಂಗಳೂರು. |

| | | | |
|---|---|---|---|
| | ಹಿರಿಯ ಚಲನಚಿತ್ರ ನಿರ್ದೇಶಕ,<br><br>ಸಾ.ರಾ. ಗೋವಿಂದು,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ<br><br>ನಾಗಣ್ಣ,<br>ಹಿರಿಯ ಚಲನಚಿತ್ರ ನಿರ್ದೇಶಕ<br><br>ಅಧ್ಯಕ್ಷತೆ:<br><br>ಎಸ್. ವಿ. ರಾಜೇಂದ್ರಸಿಂಗ್ ಬಾಬು<br><br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ಅಕಾಡೆಮಿ | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# "ಬೆಳ್ಳಿಹೆಜ್ಜೆ" ಯಲ್ಲಿ ಈ ಬಾರಿ ಹೆಚ್.ಡಿ. ಗಂಗರಾಜು

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಜುಲೈ 25 ನೇ ಸೋಮವಾರದಂದು ಸಂಜೆ 5–00 ಗಂಟೆಗೆ ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋಸ್‌ನಲ್ಲಿ ಹಿರಿಯ ಚಿತ್ರ ನಿರ್ಮಾಪಕ, ವಿತರಕ ಹಾಗೂ ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಹೆಚ್. ಡಿ. ಗಂಗರಾಜು ಅವರೊಂದಿಗೆ " ಬೆಳ್ಳಿಹೆಜ್ಜೆ" ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.

**ಬೆಳ್ಳಿಹೆಜ್ಜೆಯ ಸಂವಾದ ನಿರ್ವಹಣೆಯನ್ನು ಚಿತ್ರರಂಗದ ಹಿರಿಯ ಕಲಾವಿದ ಎಂ. ಕೆ. ಸುಂದರರಾಜ್ ನಡೆಸಿಕೊಡುವರು. ಮುಖ್ಯ ಅತಿಥಿಗಳಾಗಿ ಹಿರಿಯ ಕಲಾವಿದೆ ಹಾಗೂ ವಿಧಾನ ಪರಿಷತ್ ಸದಸ್ಯರಾದ ಡಾ. ಜಯಮಾಲ, ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್, ಹಿರಿಯ ಚಿತ್ರ ನಿರ್ದೇಶಕ ಎಸ್.ಕೆ. ಭಗವಾನ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ.ರಾ. ಗೋವಿಂದು ಹಾಗೂ ಹಿರಿಯ ಚಲನಚಿತ್ರ ನಿರ್ದೇಶಕ ನಾಗಣ್ಣ ಪಾಲ್ಗೊಳ್ಳುವರು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದ್ದಾರೆ.**

**ಬಾಬು:ಜಿಪಿಆರ್.**

## ಅತಿ ಶೀಘ್ರದಲ್ಲೇ ಮೂಲಭೂತ ಸೌಕರ್ಯಗಳ ಕಾರ್ಯಾರಂಭ

**__ಸಚಿವ ಆರ್. ವಿ. ದೇಶಪಾಂಡೆ.**

**ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)**

ಅತಿ ಶೀಘ್ರದಲ್ಲೇ ಮೂಲಭೂತ ಸೌಕರ್ಯಗಳ ಕಾರ್ಯಾರಂಭ ಮಾಡುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ ಅವರು ತಿಳಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾಧ್ಯಮದವರನ್ನುದ್ದೇಶಿ ಮಾತನಾಡಿದ ಅವರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ ಬಿಸಿನೆಸ್ ಪಾರ್ಕ್, ಅಂತರಾಷ್ಟ್ರೀಯ ಸಮಾವೇಶ ಕೇಂದ್ರ , ನೈಸರ್ಗಿಕ ಅನಿಲ ಕೊಳವೆ ಯೋಜನೆ, ನಗರ ಅನಿಲ ಸರಬರಾಜು ಯೋಜನೆ, ಉತ್ತರ ಕನ್ನಡ ಜಿಲ್ಲೆಯ ತದಡಿ ಬಂದರು ಯೋಜನೆ, ಜಿಲ್ಲೆಗಳಲ್ಲಿ ಕಿರುವಿಮಾನ ನಿಲ್ದಾಣಗಳ ಅಭಿವೃದ್ಧಿ, ಹೀಗೆ ಹಲವು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆಗಳ ಮೂಲಭೂತ ಸೌಕರ್ಯ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಳ್ಳಲಿದೆ ಎಂದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು 18.97 ಮಿಲಿಯನ್ ಪ್ರಯಾಣಿಕರಿಗೆ ವಿಮಾನಯಾನ ಸೌಲಭ್ಯ ಒದಗಿಸುತ್ತಿದ್ದು, ಇನ್ನು ಒಂದೂವರೆ ವರ್ಷದೊಳಗೆ ಟರ್ಮಿನಲ್ ಕೆಲಸ ಪ್ರಾರಂಭವಾಗಲಿದ್ದು 2020 ರ ಹೊತ್ತಿಗೆ ಪೂರ್ಣಗೊಳ್ಳಲಿದೆ ಎಂದರು.

ಹಾಗೆಯೇ ದೇವನಹಳ್ಳಿ ಬಿಸ್‌ನೆಸ್ ಪಾರ್ಕ್ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದ್ದು ಈ ಹಿಂದೆ ವಶಪಡಿಸಿಕೊಂಡಿದ್ದ 408 ಎಕರೆ ಜಾಗದಲ್ಲಿ 35 ಎಕರೆ ಪ್ರದೇಶದಲ್ಲಿ ಕಮ್ಯುನಿಟಿ ಸೆಂಟರ್ ಹಾಗೂ ಉಳಿದ ಜಾಗದಲ್ಲಿ ಅಂತಾರಾಷ್ಟ್ರೀಯ ಬಿಸ್‌ನೆಸ್ ಪಾರ್ಕ್ ನಿರ್ಮಾಣವಾಗಲಿದೆ. ಈಗಾಗಲೇ ಮಾಸ್ಟರ್‌ಪ್ಲಾನ್ ಸಿದ್ದಪಡಿಸಲಾಗಿದೆ ಎಂದರು.

ಬೆಂಗಳೂರು ಅಂತರಾಷ್ಟ್ರೀಯ ಸಮಾವೇಶ ಕೇಂದ್ರದ ಕೆಲಸವು ಪ್ರಗತಿಯಲ್ಲಿದ್ದು, 1050 ಕೋಟಿ ರೂ. ಗಳ ವೆಚ್ಚದಲ್ಲಿ 600 ಆಸನವುಳ್ಳ ಸಮಾವೇಶ ಸಭಾಂಗಣ, ಪ್ರದರ್ಶನ ಮಂದಿರ, ಫುಡ್ ಕೋರ್ಟ್‌ಗಳು ಸೇರಿದಂತೆ, ಪಂಚತಾರಾ ಹೋಟೆಲ್‌ಗಳು ಒಳಗೊಂಡಿರುತ್ತವೆ. ಇದಕ್ಕೆ ಬೇಕಾಗುವ

ಭೂಮಿಯನ್ನು ಸರ್ಕಾರ ಒದಗಿಸುತ್ತದೆ. ಹೂಡಿಕೆದಾರರನ್ನು ಟೆಂಡರ್ ಮೂಲಕ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ 34.25 ಎಂ.ಟಿ.ಪಿ.ಎ. ಸಾಮರ್ಥ್ಯದ ಸರ್ವಋತು ಬಂದರನ್ನು 3,800 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

ಸಾಮಾನ್ಯ ಜನರು ವಿಮಾನದಲ್ಲಿ ಪ್ರಯಾಣಿಸಲು ಅನುಕೂಲವಾಗುವಂತೆ ಚಿಕ್ಕಮಗಳೂರು, ಕಾರವಾರ, ಮಡಿಕೇರಿ ಉಡುಪಿ, ರಾಯಚೂರು, ಗದಗ ಬಾಗಲಕೋಟೆ ಮತ್ತು ದಾವಣಗೆರೆಗಳಲ್ಲಿ ಕಿರು ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇದಕ್ಕಾಗಿ ಅರಣ್ಯ ಭೂಮಿಯನ್ನು ಹೊರತುಪಡಿಸಿ ಭೂಮಿಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ.

ಯೋಜನೆಗಳು ನಿಧಾನಗತಿಯಲ್ಲಿ ಸಾಗಿದಲ್ಲಿ ಕೇವಲ ರಿಯಲ್ ಎಸ್ಟೇಟ್‌ಗಳಿಗೆ ಲಾಭವಾಗುವುದೇ ಹೊರತು ಯೋಜನೆ ಜಾರಿಯಾಗುತ್ತಿಲ್ಲ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಚಿವರು ಯೋಜನೆಗಳ ಜಾರಿಯಲ್ಲಿ ಹಲವಾರು ತಾಂತ್ರಿಕ ಸಮಸ್ಯೆಗಳು ಎದುರಾಗುತ್ತವೆ ಅವುಗಳನ್ನು ಸರಿಪಡಿಸಿಕೊಂಡು ಮುಂದೆ ಸಾಗಬೇಕಾಗಿದೆ. ಸಮಸ್ಯೆಗಳಿಲ್ಲದ ಕಡೆ ತ್ವರಿತಗತಿಯಲ್ಲಿ ಕಾರ್ಯ ನಡೆಯುತ್ತಿದ್ದು ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗುತ್ತದೆ.

ಇದಲ್ಲದೆ 10 ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ರಾಮನಗರ-ಮೈಸೂರು ಜೋಡಿ ರೈಲು ಮಾರ್ಗ, ಬೆಂಗಳೂರು-ಹಾಸನ, ಬೀದರ್ - ಕಲಬುರಗಿ, ಗಿಣಿಗೇರಾ-ರಾಯಚೂರು ತುಮಕೂರು-ರಾಯದುರ್ಗ, ಬಾಗಲಕೋಟೆ-ಕೊಡಚಿ , ಚಿಕ್ಕಮಗಳೂರು-ಸಕಲೇಶಪುರ, ಗದಗ-ವಾಡಿ ಹೆಜ್ಜಾಲ-ಚಾಮರಾಜನಗರ ಮತ್ತು ತುಮಕೂರು-ದಾವಣಗೆರೆ ಹೊಸ ರೈಲು ಮಾರ್ಗಗಳನ್ನು ಅನುಷ್ಠಾನಗೊಳಿಸಲು 2,180.04 ಕೋಟಿ ಗಳನ್ನು ಬಿಡುಗಡೆ ಮಾಡಲಾಗಿದ್ದು ಈ ಯೋಜನೆಗಳು 2016-17 ಕ್ಕೆ ಸಂಚಾರಕ್ಕೆ ತೆರವುಗೊಳ್ಳಲಿವೆ ಎಂದರು.

ಇಂದಿರ